# <u>ನಗರಸಭಾ ಕಾರ್ಯಾಲಯ, ಮಂಡ್ಯ.</u>

**<u>ಸಂಖ್ಯೆ:ನಸಮಂ/ಸಭೆ/5/2008-09.</u>** ದಿ<u>ನಾಂಕ:13-11-2008.</u>

## <u>ತುರ್ತು ವಿಶೇಷ ಸಭೆ</u>

ದಿನಾಂಕ:13-11-2008ರಂದು ಗುರುವಾರ ಮಧ್ಯಾಹ್ನ 2-00ಗಂಟೆಗೆ ಸರಿಯಾಗಿ ಮಂಡ್ಯ ನಗರಸಭಾ ಕಾರ್ಯಾಲಯದ ಮಾನ್ಯ ಅಧ್ಯಕ್ಷರವರ ಕೊಠಡಿಯಲ್ಲಿ ಮಾನ್ಯ ನಗರಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆಸಿದ ತುರ್ತು ವಿಶೇಷ ಸಭೆ ನಡವಳಿಕೆಗಳು.

ಹಾಜರಿ: 21 ಗೈರುಹಾಜರಿ:13 ಖಾಲಿ:1 ಒಟ್ಟು:35

**<u>ವಿಷಯ:1:-</u>** 2008-09ನೇ ಸಾಲಿಗೆ ಕರ್ನಾಟಕ ರಾಜ್ಯ ಹಣಕಾಸು ಆಯೋಗದಿಂದ ಬಿಡುಗಡೆಯಾಗಿರುವ ಮುಕ್ತ ನಿಧಿ ವಿನಿಯೋಗಕ್ಕಾಗಿ ತಯಾರಿಸಿರುವ ಕ್ರಿಯಾ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ.

**<u>ತೀರ್ಮಾನ:1:-</u>** ದಿನಾಂಕ:25-8-2008ರಂದು ನಡೆದ ನಗರಸಭೆ ಸಾಮಾನ್ಯ ಸಭೆಯಲ್ಲಿ ವಿಷಯ ಸಂಖ್ಯೆ:2ರಂತೆ ಈ ವಿಷಯದ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡಲಾಗಿ 38 ಕಾಮಗಾರಿಗಳಿಗೆ ಒಟ್ಟು 222.00ಲಕ್ಷ ರೂ.ಗಳ ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಗಿದ್ದು ಸದರಿ ಅನುಮೋದನೆಯಂತೆ ಮಾನ್ಯ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯರವರಿಗೆ ಆಡಳಿತಾತ್ಮಕ ಅನುಮೋದನೆಗಾಗಿ ಸಲ್ಲಿಸುವಂತೆ ತೀರ್ಮಾನಿಸಲಾಗಿತ್ತು. ತದನಂತರ ಪ್ರಸ್ತಾವನೆಯನ್ನು ಮಾನ್ಯ ಜಿಲ್ಲಾಧಿಕಾರಿಗಳಿಗೆ ಕಳುಹಿಸಲಾಗಿ, ಜಿಲ್ಲಾಧಿಕಾರಿಗಳವರ ಅಧಿಕೃತಜ್ಞಾಪನ ಪತ್ರ ಸಂಖ್ಯೆ:ಮುನಿಸಿ(3) 26/2008-09 ದಿನಾಂಕ: 07-10-2008ರಲ್ಲಿ ಕಾಮಗಾರಿಗಳಿಗೆ ಕ್ರಮ ಸಂಖ್ಯೆ:1 ರಿಂದ 10ರವರೆಗೆ ಪ್ಯಾಕೇಜ್-1 ಎಂದು, ಕ್ರಮ ಸಂಖ್ಯೆ:11 ರಿಂದ 20ರ ವರೆಗೆ ಪ್ಯಾಕೇಜ್-2 ಎಂದು, ಕ್ರಮ ಸಂಖ್ಯೆ:21 ರಿಂದ 29ರವರೆಗೆ ಪ್ಯಾಕೇಕ್-3 ಎಂದು ಮತ್ತು ಕ್ರಮ ಸಂಖ್ಯೆ:30 ರಿಂದ 43ರ ವರೆಗೆ ಪ್ಯಾಕೇಜ್-4 ಎಂದು ವಿಂಗಡಿಸಿ ಅನುಮೋದನೆ ನೀಡಿರುತ್ತಾರೆ. (ಕ್ರಮ ಸಂಖ್ಯೆ:1 ರಿಂದ 38 ಕಾಮಗಾರಿಗಳ ಪೈಕಿ ರಸ್ತೆ ಮತ್ತು ಚರಂಡಿ ಕಾಮಗಾರಿಗಳನ್ನು ಪ್ರತ್ಯೇಕಿಸಿ 43 ಕಾಮಗಾರಿಗಳಾಗಿ ವಿಂಗಡಿಸಲಾಗಿದೆ).

ಮಾನ್ಯ ಜಿಲ್ಲಾಧಿಕಾರಿಯವರ ಆದೇಶದಂತೆ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಲಾಗಿ ದಿನಾಂಕ:18-10-2008 ರಂದು ಮಾನ್ಯ ಜಿಲ್ಲಾಧಿಕಾರಿಗಳು ಸಧ್ಯಕ್ಕೆ ಟೆಂಡರ್ ಪ್ರಕ್ರಿಯೆಯನ್ನು ಸ್ಥಗಿತಗೊಳಿಸುವಂತೆ ದೂರವಾಣಿ ಮೂಲಕ ಸೂಚಿಸಿದ್ದರ ಮೇರೆಗೆ ಟೆಂಡರ್ ಪ್ರಕ್ರಿಯೆ ಸ್ಥಗಿತಗೊಳಿಸಲಾಯಿತು. ನಗರಸಭಾ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರುಗಳು ಪ್ಯಾಕೇಜ್ ರೀತ್ಯಾ ಕಾಮಗಾರಿ ನಿರ್ವಹಿಸುವುದನ್ನು ಕೈಬಿಟ್ಟು, ವಾರ್ಡ್‌ವಾರು ಪ್ರತ್ಯೇಕ ಕಾಮಗಾರಿ ನಿರ್ವಹಿಸಲು ಅನುಮೋದನೆ ನೀಡುವಂತೆ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲು ತೀರ್ಮಾನಿಸಲಾಯಿತು.

ಸಹಿ:
ಅಧ್ಯಕ್ಷರು,
ನಗರಸಭೆ, ಮಂಡ್ಯ.

"ನಕಲು"

ಪೌರಾಯುಕ್ತರು,
ನಗರಸಭೆ, ಮಂಡ್ಯ.